ರಾಗಬದ್ಧ ಅಲ್ಲ, ಛಂದೋಬದ್ಧ. ಬೇಂದ್ರೆಯವರಿಗೂ ಹಾಡು–ಪಾಡು ಇಂಥವು ಬಹಳ ಹಿಡಿಸಿತು. ಕಾರ್ಯಕ್ರಮ ಮುಗೀತು. 'ಎಲ್ಲಿಯವನಪ್ಪ ನೀನು?' ಅಂದರು. 'ಗುಲ್ಬರ್ಗಾದವನು' ಅಂದೆ. 'ನಾಳೆಗೆ ಬರ್ತೀಯೇನು ನಮ್ಮನೆಗೆ?' ಅಂದರು. ನನ್ನಂಥ ಚಿಲ್ಲರೆ ಮನುಷ್ಯನ್ನ ಯಾರು ಕೇಳ್ತಾರ? ದೊಡ್ಡವರು ಕರೀತಿದಾರ ಅಂತ ಸಂತೋಷದಿಂದ 'ಆಯ್ತು' ಅಂದೆ. ಅಲ್ಲಿ ಕೀರ್ತಿನಾಥ ಕುರ್ತಕೋಟಿಯವರು ಇದ್ದರು. ಜಿ.ಬಿ. ಜೋಶಿ ಇದ್ದರು. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತ ನಾನು ಅವರ ಮನೆಗೆ ಹೋದಿವಿ. ಮುಂಜಾನೆ ಹನ್ನೊಂದರಲಿಂದ ಸಂಜಿ ಐದರ ತನಕಾನೂ ಬೇಂದ್ರೆಯವರೂ ಕುರ್ತಕೋಟಿಯವರೂ ಹರಟೆ ಹೊಡದರು. ಕೇಳಿಕೋತ ಕೂತೆ. 'ಬಹಳ ಚೊಲೋ ಬರೀತಿಪಾ ನೀನು. ಯಾವುದು ನಿನ್ನ ಭಾಷೆ?' ಅಂತಂದು ಬೇಂದ್ರೆ ಕೇಳಿದರು. 'ಕನ್ನಡಾರೀ' ಅಂದೆ. 'ಮತ್ತ ಕನ್ನಡದೊಳಗ ಯಾಕ ಬರಿಯಂಗಿಲ್ಲ?' ಅಂದರು. 'ನನಗ ಕನ್ನಡ ಏನೂ ಬರಂಗಿಲ್ಲ. ಅಕ್ಷರ ಜ್ಞಾನಾನೂ ಇಲ್ಲ' ಅಂದೆ. 'ಮತ್ತ ಇಷ್ಟೊತ್ತನ ನನ್ನ ಜೊತಿ ಯಾವ ಭಾಷೆದಾಗ ಮಾತಾಡಿದಿ?' ಅಂದರು. 'ಕನ್ನಡಾರೀ... ಅಂದರ ನಂದು ಗುಲ್ಬರ್ಗಾ ಕನ್ನಡ' ಅಂದೆ. 'ಮತ್ತೆ ನಾನು ಮಾತಾಡೋದು ಏನು ಹೊಸಾಕನ್ನಡ? ನೀ ಮಾತಾಡಿದಂಗ ನಾ ಮಾತಾಡಲಿಕ್ಹತ್ತೀನಿ. ನಾ ಮಾತಾಡಿದ್ದು ನಿನಗೆ ತಿಳೀತು. ನೀ ಮಾತಾಡಿದ್ದು ನನಗ ತಿಳಿತು. ಇದೇ ಕನ್ನಡದಾಗ ಬರಿ' ಅಂದರು. ಅಂದಮೇಲೆ ನನಗ ಮೈ ಜುಮ್ ಅಂತು. ಚಹಾ ತಿಂಡಿ ಆತು. ಅದನ್ನ ತೀರಿಸಿ ಹೊರಗ ಬರೋ ಕಾಲಕ್ಕ, ಎಲ್ಲರ ಕೈಗೂ ಸಕ್ರಿ ಹಾಕಿದರು. ನನಗ ಹಾಕಲಿಲ್ಲ. ನನಗ ಅಷ್ಟು ಲಕ್ಷ್ಯ ಇರಲಿಲ್ಲ. ಸುಮ್ಮನೆ ನಿಂತೆ. ಇಂವ ರಾಮಜೋಶಿ, ಜಿ.ಬಿ.ಯವರ ಮಗ, 'ಕುಸನೂರರಿಗೆ ಹಾಕಲಿಲ್ಲ' ಅಂತಂದ. 'ಕನ್ನಡದಾಗ ಬರಿತೀನಿ ಅಂತ ಅವರು ನನಗ ವಚನ ಕೊಟ್ಟರ ಹಾಕ್ತೀನಿ' ಅಂತಂದರು. ನಾ ಈ ಮುದುಕನಿಂದ ಬಿಡಿಸಿಕೋಬೇಕಲ್ಲ ಅಂತ 'ಆಯ್ತು ಬರೀತೀನಿ' ಅಂದೆ. ಅಡಿಗರು 'ಸಾಕ್ಷಿ' ಪತ್ರಿಕೆ ತೆಗೀತಿದ್ರು. ಬೆಂಗಳೂರು ಸಾಹಿತ್ಯ ಸಮ್ಮೇಳನದೊಳಗ ಅವರೊಂದು ರೂಮಿನ್ಯಾಗ, ನಾನೊಂದು ರೂಮಿನ್ಯಾಗ ಇದ್ದೆವು. ಅವರು 'ಕುಸನೂರರೇ ಬಹಳ ಚೆನ್ನಾಗಿ ಬರೀತೀರಿ. ಬರೀತಾ ಇರೀ' ಅಂತಂದರು. 'ಸಾಕ್ಷಿ'ಗೆ ನನ್ನವು ಕವನ ಛಾಪಿಸಿದ್ರು.

◆ 'ಕತ್ತಲೆಯಲ್ಲಿ ಬತ್ತಲೆ ತಿರುಗುವ ನಮ್ಮ ಶೀಲಕನ್ನಿಕೆಗೆ ಬೆಳಕಿನ ಸೀರೆ ತರುವುದಿದೆ' ಮುಂತಾದ ನೆನಪಿಡುವ ಹಾಯಕು ಸಾಲುಗಳನ್ನು ಬರೆದವರು ನೀವು.

ಕನ್ನಡಕ್ಕ ಹಾಯಕು ಇಂಟರ್‌ಡ್ಯೂಸ್ ಮಾಡಿದವನೇ ನಾನು. ಅವು ಒಂದು ಸಾವಿರಕ್ಕಿಂತ ಮ್ಯಾಲವ. ಲಂಕೇಶ ಒಂದಷ್ಟು ಪ್ರಕಟ ಮಾಡಿದರು. ಸಂಕಲನವಾಗಿ ಬಂದಿಲ್ಲ. ಒಂಥರಾ ಟ್ರಾನ್ಸ್‌ಲಾಜಿಕಲ್ ಪೋಯೆಮ್ಸ್‌ರೀ ಅವು. ಕಾವ್ಯದೊಳಗೆ ಪೂರಾ ಕನ್‌ಸ್ಟ್ರಕ್ಷನ್ ಟೆಕ್ನಿಕ್ ಚೇಂಜ್ ಮಾಡಿ ಬರೆದೆ. ಎ.ಕೆ. ರಾಮಾನುಜನ್ ಬರೆದರು ಇವರು ಬರೆದರು ಅಂತ ಹೇಳತಾರ. ಆದರೆ ಅವರಕ್ಕಿಂತ ಹತ್ತು ವರ್ಷ ಮುಂಚೇನೇ ನಾನು ಪ್ರಯೋಗ ಮಾಡಿದ್ದೆ. ಕನ್ನಡಕ್ಕ ಅಸಂಗತ ನಾಟಕ ತಂದೋನೇ ನಾನು ಅಂತ ವಿಮರ್ಶಕರು ಒಪ್ಪಿಕೊಂಡಾರ.

◆ ನಮ್ಮಲ್ಲಿರುವ ಇತರೆ ಕವನ ರೂಪಗಳಿಗೆ ಹೋಲಿಸಿದರೆ, ಹಾಯಕು ವಿಶೇಷವೇನು?

ಸಂವೇದನೆಯ ಮೂಲ ಬೇಸನ್ನು ಟಚ್ ಮಾಡ್ತದ ಹಾಯಕು. ಅದರ ಸಂವೇದನೆಗೆ ಪ್ರಿಯಾಂಬಲ್ ಇರೋದಿಲ್ಲ. ನೇರವಾಗಿ ಬೀಜರೂಪದಲ್ಲಿ ಏನು ಹೇಳಬೇಕೊ ಅದನ್ನು ಹೇಳತದ. ಇದು ಬುದ್ಧಿಸ್ಟ್ ಸಿಸ್ಟಮನಿಂದ ಬಂದಿದ್ದು. ಅನೇಕ ಮಾಂಕ್ ಸಹಿತ ಹಾಯಕು ಬರದಾರ. ಇದರ ಮಹತ್ವ ಅಂತಂದರ ಕಲಾಸಕ್ತಿ; ನಿಮಗ ದೇವರ ಜತೆ ಸತ್ಸಂಗ ಸಾಧಿಸಬೇಕಾಗಿತ್ತು ಅಂದರ, ನೇಚರ್ ಜತೆ ಒಡನಾಟ ಇರಬೇಕು. ದೇವರು ಎದುರು ಬಂದು ನಿಲ್ಲಂಗಿಲ್ಲ. ದೇವರ ಸಾನಿಧ್ಯ ಅಂದರ ನೇಚರ್